ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 214
ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್, (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 17.02.2022
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ	ಪ್ರಶ್ನೆಗಳು	ಉತ್ತರಗಳು
ಅ)	ಐ.ಎಂ.ಎ ಹಗರಣದಲ್ಲಿ ಆರೋಪಿತರಾದ ಐಪಿಎಸ್ ಅಧಿಕಾರಿಗಳಿಗೆ ಯಾವ ದಿನಾಂಕದಂದು ಇಲಾಖಾ ವಿಚಾರಣೆಯ ಸಂಬಂಧ ನೋಟಿಸ್ ನೀಡಲಾಗಿದೆ; ಯಾವ ಅಧಿಕಾರಿಗಳನ್ನು ವಿಚಾರಣಾ ಅಧಿಕಾರಿಯನ್ನಾಗಿ ನೇಮಿಸಲಾಗಿದೆ; ಇದುವರೆಗೆ ಎಷ್ಟು ದಿನಗಳ ಕಾಲ ಇಲಾಖಾ ವಿಚಾರಣೆ ನಡೆಸಲಾಗಿದೆ; (ದಿನಾಂಕದೊಂದಿಗೆ ಮಾಹಿತಿ ನೀಡುವುದು)	ಐ.ಎಂ.ಎ ಪ್ರಕರಣದಲ್ಲಿ ಆರೋಪಿತರಾದ ಶ್ರೀ ಹೇಮಂತ್ ನಿಂಬಾಳ್ಕರ್, ಐಪಿಎಸ್ ಹಾಗೂ ಶ್ರೀ ಅಜಯ್ ಹಿಲೋರಿ, ಐಪಿಎಸ್ ಇವರಿಗೆ ಕ್ರಮವಾಗಿ ದಿನಾಂಕ: 02.02.2021 ರಂದು ಹಾಗೂ 01.02.2021 ರಂದು ದೋಷಾರೋಪಣಾ ಪಟ್ಟಿ ಜಾರಿ ಮಾಡಲಾಗಿದೆ. ಶ್ರೀ ಹೇಮಂತ್ ನಿಂಬಾಳ್ಕರ್, ಐಪಿಎಸ್ ಇವರು ಈ ದೋಷಾರೋಪಣಾ ಪಟ್ಟಿ ವಿರುದ್ಧ ಕೇಂದ್ರಿಯ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಪ್ರಸ್ತುತ, ಅಧಿಕಾರಿಯವರು ದೋಷಾರೋಪಣಾ ಪಟ್ಟಿಗೆ ತಮ್ಮ ಪ್ರತಿ ರಕ್ಷಣಾ ಹೇಳಿಕೆಯನ್ನು ಸಲ್ಲಿಸಬೇಕಾಗಿರುತ್ತದೆ. ಶ್ರೀ ಅಜಯ್ ಹಿಲೋರಿ, ಐಪಿಎಸ್ ಇವರ ಇಲಾಖಾ ವಿಚಾರಣೆ ಕುರಿತಂತೆ ಶ್ರೀ ಜಿ. ವಿ ಕೃಷ್ಣ ರಾವ್, (ನಿವೃತ್ತ ಭಾ.ಆ.ಸೇ) ಇವರನ್ನು ವಿಚಾರಣಾಧಿಕಾರಿಯವರನ್ನಾಗಿ ಹಾಗೂ ಶ್ರೀ ಸುಬ್ರಮಣ್ಯೇಶ್ವರ ರಾವ್, ಐಪಿಎಸ್ ಇವರನ್ನು ಮಂಡನಾಧಿಕಾರಿಯವರನ್ನಾಗಿ ದಿ: 27.09.2021 ನೇಮಕ ಮಾಡಲಾಗಿದೆ. ವಿಚಾರಣೆ ಪ್ರಗತಿಯಲ್ಲಿದೆ. ಈ ಕೆಳಕಂಡ ದಿನಾಂಕಗಳಂದು ವಿಚಾರಣೆಯನ್ನು ನಡೆಸಲಾಗಿದೆ. ದಿನಾಂಕ: 26.11.2021, 03.12.2021, 10.12.2021, 16.12.2021, 22.12.2021, 30.12.2021, 06.01.2022 ಮತ್ತು 13.01.2022.

ಆ)	ತನಿಖಾ ಸಂಸ್ಥೆಯು ಐ.ಎಂ.ಎ ಹಗರಣದಲ್ಲಿ ಆರೋಪಿತರಾದ ಐಪಿಎಸ್ ಅಧಿಕಾರಿಗಳ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಿದೆ; ಯಾವ ದಿನಾಂಕದಂದು ಮಾಡಿದೆ; (ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು)	ತನಿಖಾ ಸಂಸ್ಥೆಯು ಆರೋಪಿತ ಅಧಿಕಾರಿಗಳ ವಿರುದ್ಧ ನ್ಯಾಯಲಯದಲ್ಲಿ ಪ್ರಕರಣವನ್ನು ದಾಖಲಿಸಲು ಅಭಿಯೋಜನಾ ಮಂಜೂರಾತಿಯನ್ನು ಈ ಇಬ್ಬರೂ ಅಧಿಕಾರಿಗಳ ವಿರುದ್ಧ ದಿನಾಂಕ: 18.12.2019 ರಂದು ಕೋರಿರುತ್ತದೆ. ದಿನಾಂಕ: 09.09.2020 ರಂದು ಅಭಿಯೋಜನಾ ಮಂಜೂರಾತಿಯನ್ನು ನೀಡಲಾಗಿದೆ. ಸದರಿ ಅಧಿಕಾರಿಗಳ ವಿರುದ್ಧ ಇಲಾಖೆಯಿಂದ ಶಿಸ್ತು ಕ್ರಮ ಕೈಗೊಳ್ಳಲು ಸಹ ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ದಿನಾಂಕ: 01.02.2021 ಹಾಗೂ 02.02.2021 ರಂದು ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿದೆ.
ಇ)	ಐ.ಎಂ.ಎ ಹಗರಣದಲ್ಲಿ ಆರೋಪಿತರಾದ ಐಪಿಎಸ್ ಅಧಿಕಾರಿಗಳ ಮೇಲಿನ ಆರೋಪದ ಕುರಿತು ಯು.ಪಿ.ಎಸ್‌ಸಿ ಮತ್ತು ಕೇಂದ್ರ ಗೃಹ ಇಲಾಖೆಗೆ ಪತ್ರ ಬರೆಯಲಾಗಿದೆಯೇ; ಹಾಗಿದ್ದಲ್ಲಿ, ಯಾವ ದಿನಾಂಕದಂದು ಪತ್ರ ಬರೆಯಲಾಗಿದೆ; ಭ್ರಷ್ಟ ಅಧಿಕಾರಿಗಳನ್ನು ಕಡ್ಡಾಯ ನಿವೃತ್ತಿಗೊಳಿಸುವ ನಿಯಮದ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು)	ಶ್ರೀ ಅಜಯ್ ಹಿಲೋರಿ, ಐಪಿಎಸ್ ಇವರನ್ನು ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿಯನ್ನು ಕೋರಿ ದಿನಾಂಕ: 26.07.2021 ರಂದು ಕೇಂದ್ರ ಗೃಹ ಮಂತ್ರಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಶ್ರೀ ಹೇಮಂತ್ ನಿಂಬಾಳ್ಕರ್, ಐಪಿಎಸ್ ಇವರ ಅಭಿಯೋಜನಾ ಮಂಜೂರಾತಿ ಕುರಿತು ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಇಲಾಖಾ ವಿಚಾರಣೆ ಮತ್ತು ನ್ಯಾಯಾಂಗ ಪ್ರಕರಣಗಳು ಸದರಿ ಅಧಿಕಾರಿಗಳ ವಿರುದ್ಧ ಬಾಕಿ ಇರುವುದರಿಂದ, ವಿಚಾರಣೆ ಅಂತಿಮಗೊಂಡ ನಂತರ ಕ್ರಮ ಕೈಗೊಳ್ಳಬೇಕಾಗುತ್ತದೆ.
ಈ)	ಐಪಿಎಸ್ ಅಧಿಕಾರಿಗಳು ಈ ಪ್ರಕರಣದಲ್ಲಿ ಭಾಗಿಯಾಗಿರುವ ಕಾರಣಕ್ಕಾಗಿ ಅವರನ್ನು ರಕ್ಷಿಸಲು ಮತ್ತು ಕೆಳಹಂತದ ಅಧಿಕಾರಿಗಳನ್ನು ಮಾತ್ರವೇ ಶಿಕ್ಷಿಸಲು ಲಾಬಿ ನಡೆಯುತ್ತಿರುವ ಕುರಿತು ಸರ್ಕಾರದ ನಿಲುವೇನು?	ಪ್ರಕರಣದಲ್ಲಿ ಭಾಗಿಯಾಗಿರುವ ಐಪಿಎಸ್‌ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಇ-ಸಿಆಸುಇ 40 ಎಸ್‌ಪಿಎಸ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ